# ನಿವೃತ್ತ ಪ್ರಿನ್ಸಿಪಾಲ್ ಡಾ.ಪಿ.ಸುಧಾಕರ ಶೆಟ್ಟಿ

**ಕಟಪಾಡಿ:** ಸುರತ್ಕಲ್ ಕೆಆರ್‌ಇಸಿ (ಎನ್‌ಐಟಿಕೆ)ಯ ಮಾಜಿ ಪ್ರಿನ್ಸಿಪಾಲ್ ಡಾ. ಪಿ. ಸುಧಾಕರ ಶೆಟ್ಟಿ (86) ಗುರುವಾರ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ನಿಧನರಾದರು.



ಅವರಿಗೆ ಪತ್ನಿ, ಪುತ್ರಿ ಮಣಿಪಾಲ ಕೆ.ಎಂ.ಸಿಯ ಒಬಿಜಿ ವಿಭಾಗದ ಪ್ರೊಫೆಸರ್ ಹಾಗೂ ಯೂನಿಟ್ ಹೆಡ್ ಡಾ.ಜ್ಯೋತಿ ಶೆಟ್ಟಿ, ಪುತ್ರ ಮೆಡಿಕಲ್ ಆಫೀಸರ್ ಡಾ. ಜೀವನ್ ಶೆಟ್ಟಿ ಇದ್ದಾರೆ.

ಕೆ.ಆರ್.ಇ.ಸಿ ಯಲ್ಲಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರೊಫೆಸರ್, ಬಳಿಕ ಹೆಡ್ ಆಫ್ ದ ಡಿಪಾರ್ಟ್‌ಮೆಂಟ್ ಆಗಿ ಸುದೀರ್ಘ ಸೇವೆ ಸಲ್ಲಿಸಿ, 1994ರಿಂದ 97ರ ವರೆಗೆ ಪ್ರಿನ್ಸಿಪಾಲ್‌ರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಬಳಿಕ ಶಿವಮೊಗ್ಗದ ಜವಾಹರಲಾಲ್ ನೆಹರು ನ್ಯಾಷನಲ್ ಕಾಲೇಜು ಆಫ್ ಎಂಜಿನಿಯರಿಂಗ್‌ನ ಪ್ರಿನ್ಸಿಪಾಲ್‌ರಾಗಿ ಹಾಗೂ ಮಂಗಳೂರು ವಾಮಂಜೂರಿನ ಸಂತ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಪ್ರಥಮ ಪ್ರಿನ್ಸಿಪಾಲ್‌ರಾಗಿದ್ದರು. ತಾಂತ್ರಿಕ ಕ್ಷೇತದಲ್ಲಿ ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಅನೇಕ ಪ್ರಬಂಧ ಮಂಡಿಸಿದ್ದರು. ಅಮೆರಿಕದಲ್ಲಿ ಪೋಸ್ಟ್ ಡಾಕ್ಟರೇಟ್ ಆಗಿ ಸಂಶೋಧನೆ ಕ್ಷೇತ್ರದಲ್ಲೂ ಅನೇಕ ಸೇವೆ ಮಾಡಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಸರಕಾರದ ಸಮಿತಿಗಳಲ್ಲಿದ್ದು ಸರಕಾರಕ್ಕೆ ತಾಂತ್ರಿಕ ಸಲಹೆ ಕೊಡುತ್ತಿದ್ದರು. ಅವರು ಕುಂತಳ ನಗರದ ಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಕರೆಸ್ಪಾಂಡೆಂಟ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

**ಇಂದು ಅಂತ್ಯಕ್ರಿಯೆ:** ಅವರ ಅಂತ್ಯ ಕ್ರಿಯೆಯು ಸೆ.13 ರಂದು ಬೆಳಗ್ಗೆ 11 ಗಂಟೆಗೆ ಕುಂತಳ ನಗರ ಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಬಳಿಯಿರುವ ನಿವಾಸದಲ್ಲಿ ಜರುಗಲಿದೆ.

Vijay karnataka, Date:13/09/24, p,no-02